

ಅಬ್ಬಾ ನೋವು...
ಮೊಹಮ್ಮದ್ ಶಮಿ

## ರಣಜಿಗೆ ಉತ್ತೇಜನ ಯಾಕೆ ಬೇಕು?

ಭಾರತ ತಂಡದಲ್ಲಿ ದಶಕಗಳ ಕಾಲ ಸ್ಥಾನ ಗಿಟ್ಟಿಸುತ್ತಿದ್ದ, ಗಟ್ಟಿ ನೆಲೆಯಾಗಿ ಇರುತ್ತಿದ್ದ ಅನೇಕ ಆಟಗಾರರು ಈಗ ಒಂದೆರೆಡು ವರ್ಷ ರಾಷ್ಟ್ರೀಯ ತಂಡದಲ್ಲಿ ಕಾಣಿಸಿಕೊಂಡರೆ ಅದೇ ಹೆಚ್ಚು ಎನ್ನುವಂತೆ ಆಗಿದೆ. ಬೆಂಚ್‌ಸ್ಟ್ರೆಂಥ್ ಬಲವೇ ಇಲ್ಲದಂತಾಗಿದೆ.

ಭಾರತ ಟೆಸ್ಟ್ ತಂಡಕ್ಕೆ ಬರುವ ಆಟಗಾರರ ಸಂಖ್ಯೆ ಹೆಚ್ಚಾಗಲು ರಣಜಿಗೆ ಮೊದಲಿಗಿಂತಲೂ ಹೆಚ್ಚು ಪ್ರೋತ್ಸಾಹ ಬೇಕು. ಟೆಸ್ಟ್ ತಂಡದಲ್ಲಿ ಅಜಿಂಕ್ಯ ರಹಾನೆ ಮತ್ತು ಚೇತೇಶ್ವರ ಪೂಜಾರ ಅವರ ತಕ್ಷಣ ಬದಲಿ ಆಟಗಾರರ ಅಗತ್ಯವಿದೆ. ರಣಜಿ ಟ್ರೋಫಿ ಇಲ್ಲದಿದ್ದರೆ, ಕೆಂಪು ಬಾಲ್ ಕ್ರಿಕೆಟ್‌ನಲ್ಲಿ ಫಾರ್ಮ್‌ನಲ್ಲಿರುವ ಆಟಗಾರರು ಯಾರು ಎಂದು ರಾಷ್ಟ್ರೀಯ ಆಯ್ಕೆದಾರರಿಗೆ ತಿಳಿಯುವುದಾದರೂ ಹೇಗೆ?

'ಪ್ರಿಯ ಕೆಂಪು ಚೆಂಡು, ದಯವಿಟ್ಟು ನನಗೆ ಒಂದು ಅವಕಾಶ ನೀಡಿ, ನೀವೆಲ್ಲರೂ ಹೆಮ್ಮೆ ಪಡುವಂತೆ ಮಾಡುತ್ತೇನೆ' ಎಂದು ಸೌರಾಷ್ಟ್ರದ ಎಡಗೈ ವೇಗಿ ಜಯದೇವ್ ಉನದ್ಕತ್ ಟೆಸ್ಟ್ ಪಂದ್ಯದ ಚೆಂಡಿನ ಚಿತ್ರವನ್ನು ಸಾಮಾಜಿಕ ತಾಣದಲ್ಲಿ ಇತ್ತೀಚೆಗೆ ಹಂಚಿಕೊಂಡಿದ್ದು ಭಾರಿ ಸುದ್ದಿಯಾಗಿತ್ತು.

ಇಂಗ್ಲೆಂಡ್‌ನಲ್ಲಿ ನಡೆಯುವ ಕೌಂಟಿ ತಂಡಗಳ ಚಾಂಪಿಯನ್‌ಷಿಪ್ ಮಾದರಿಯಲ್ಲಿ ಭಾರತದಲ್ಲಿ ರಣಜಿ ನಡೆಸಲಾಗುತ್ತಿದೆ. ದೇಶೀಯವಾಗಿ ಕ್ರಿಕೆಟ್ ಗಟ್ಟಿಗೊಳಿಸಲು ಮೇವಾರ್ ಟ್ರೋಫಿ, ಆರು ದಶಕಗಳ ಹಿಂದೆ ಆರಂಭವಾದ ದುಲೀಪ್ ಟ್ರೋಫಿ, 1977ರಲ್ಲಿ ಶುರುವಾದ ವಿಲ್ಸ್ ಟ್ರೋಫಿ, ಭಾರತ ತಂಡದ ಮಾಜಿ ನಾಯಕನ ಹೆಸರಲ್ಲಿ ನಡೆಯುವ ದೇವಧರ್ ಟ್ರೋಫಿ, ಇರಾನಿ, ಎನ್‌ಕೆಪಿ ಸಾಳ್ವೆ ಚಾಲೆಂಜರ್ ಟ್ರೋಫಿ, ವಲಯವಾರು ಅಂತರಿಕ ಏಕದಿನ ಟೂರ್ನಿಗಳ ಆಯೋಜನೆ, 19 ವರ್ಷದ ಒಳಗಿನವರಿಗೆ ನಡೆಯುವ ಕೂಚ್ ಬೆಹಾರ್, ಸಿ.ಕೆ. ನಾಯ್ಡು ಟ್ರೋಫಿ, ಎಂ.ಎ. ಚಿದಂಬರಂ, ವಿನೂ ಮಂಕಡ್ ಟ್ರೋಫಿ ಮತ್ತು 16 ವರ್ಷದ ಒಳಗಿನವರ ವಿಭಾಗಕ್ಕೆ ವಿಜಯ್ ಮರ್ಚೆಂಟ್, ವಿಜಯ್ ಹಜಾರೆ, ಮಾಧವರಾವ್ ಸಿಂಧಿಯಾ ಟ್ರೋಫಿ, ಪಾಲಿ ಉಮ್ರಿಗರ್ ಟ್ರೋಫಿ, ವಿಜಿ ಟ್ರೋಫಿ, ಹೀಗೆ ಅನೇಕ ಟೂರ್ನಿಗಳು ಇವೆ. ಇವುಗಳಲ್ಲಿ ಕೆಲವು ಪ್ರಾದೇಶಿಕವಾರು, ಇನ್ನೂ ಕೆಲವು ಹಲವು ರಾಜ್ಯಗಳಲ್ಲಿ ನಡೆಯುತ್ತಿವೆ.

ಕ್ರಿಕೆಟ್ ಜನಕರ ನಾಡು ಇಂಗ್ಲೆಂಡ್‌ನಲ್ಲಿ ನಡೆಯುವ ಕೌಂಟಿ ಕ್ರಿಕೆಟ್, ದೇಶಿ ಟೂರ್ನಿ ಮಾದರಿಯಂತಿದೆ. 18ನೇ ಶತಮಾನದಿಂದಲೇ ಜನಪ್ರಿಯವಾಗಿದ್ದ ಈ ಕ್ರಿಕೆಟ್ ಇಂಗ್ಲೆಂಡ್ ತಂಡಕ್ಕೆ ಉತ್ತಮ ಆಟಗಾರರನ್ನು ನೀಡಿದೆ ಹಾಗೂ ಜಗತ್ತಿನ ಅನೇಕ ಸರ್ವಶ್ರೇಷ್ಠ ಆಟಗಾರರನ್ನು ರೂಪಿಸಿದೆ. ದೇಶೀಯವಾಗಿ ಇಂಗ್ಲೆಂಡ್‌ನ ಕೌಂಟಿಯಷ್ಟೇ ಗೌರವ ಹಾಗೂ ಘನತೆ ರಣಜಿಗೂ ಇದೆ. ಜಗತ್ತಿನ ಶ್ರೀಮಂತ ಕ್ರಿಕೆಟ್ ಮಂಡಳಿ ಬಿಸಿಸಿಐ ಆರ್ಥಿಕವಾಗಿ ಸಬಲವಾಗಿದ್ದು, ಆಟಗಾರರಿಗೆ ಉತ್ತಮ ವೇತನ ನೀಡುತ್ತಿದೆ.

ಆರ್ಥಿಕ ವಿಚಾರದಲ್ಲಿಯೂ ನಮ್ಮಲ್ಲಿ ಬಹುಪಾಲು ದೇಶೀಯ ಕ್ರಿಕೆಟಿಗರಿಗೆ ರಣಜಿ ಅತ್ಯಂತ

## ಕೌಶಲ ಕಲಿಕೆಗೆ ರಣಜಿಯೇ ವೇದಿಕೆ

ಎರಡು ದಶಕಗಳ ಹಿಂದೆ ದೇಶಿ ಟೂರ್ನಿಗಳಲ್ಲಿ ಆಡುತ್ತಿದ್ದ ಆಟಗಾರರಿಗೆ ಉತ್ಕೃಷ್ಟ ಪ್ರತಿಭೆ ಇರುತ್ತಿತ್ತು. ತಾಂತ್ರಿಕವಾಗಿಯೂ ಪರಿಣತಿ ಹೊಂದಿರುತ್ತಿದ್ದರು. ಆದರೆ, ಫಿಟ್‌ನೆಸ್ ಪ್ರಮಾಣ ಕಡಿಮೆಯಾಗಿರುತ್ತಿತ್ತು. ಈಗಿನ ಆಟಗಾರರಲ್ಲಿ ಅತ್ಯುತ್ತಮ ಫಿಟ್‌ನೆಸ್ ಇದ್ದು, ಆಟದ ಕೌಶಲ ಮತ್ತು ತಾಂತ್ರಿಕತೆಯಲ್ಲಿ ಹಿಂದಿನವರಿಗಿಂತಲೂ ಕಡಿಮೆ ಕೌಶಲ ಹೊಂದಿದ್ದಾರೆ.

ಮೊದಲೆಲ್ಲ ರಣಜಿ ಪಂದ್ಯಗಳನ್ನಾಡುತ್ತಿದ್ದ 11 ಸದಸ್ಯರ ಪ್ರತಿ ತಂಡದಲ್ಲಿ ಕನಿಷ್ಠ ನಾಲ್ಕೈದು ಜನರನ್ನು ಸುಲಭವಾಗಿ ಗುರುತಿಸಬಹುದಾಗಿತ್ತು. ಅವರು ಅದಾಗಲೇ ರಾಷ್ಟ್ರೀಯ ತಂಡದಲ್ಲಿ ಆಡಿದ ಅನುಭವ ಹೊಂದಿದ್ದರೂ, 'ಕಲಿಕಾ ಶಾಲೆ'ಯಂತಿದ್ದ ರಣಜಿಯಲ್ಲಿ ತಪ್ಪದೇ ಪಾಲ್ಗೊಳ್ಳುತ್ತಿದ್ದರು.

ಈಗಿನ ಪರಿಸ್ಥಿತಿಯಲ್ಲಿ ಮುಂಬೈ, ಕರ್ನಾಟಕದಂಥ ತಂಡಗಳಲ್ಲಿ ಮಾತ್ರ ಇಂಥವರನ್ನು ಗುರುತಿಸಲು ಸಾಧ್ಯವಾಗುತ್ತಿದೆ. ಪ್ರಸ್ತುತ ರಣಜಿ ಟೂರ್ನಿಯಲ್ಲಿ ದೆಹಲಿ ತಂಡದಲ್ಲಿ ನಿತೇಶ್ ರಾಣಾ ಹೊರತುಪಡಿಸಿ ಉಳಿದ ಆಟಗಾರರು ಗೊತ್ತಾಗುವುದೇ ಇಲ್ಲ.

ಈ ಟೂರ್ನಿಯಲ್ಲಿ ಆಡುತ್ತಿರುವ ಬಹುತೇಕ ಆಟಗಾರರ ಹೆಸರುಗಳೇ ಬಹಳಷ್ಟು